ಇತರ ಸೌಲಭ್ಯಗಳು :

1. ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ ಮತ್ತು ಮಾರ್ಗದರ್ಶನ.
2. ಉತ್ತಮ ಗುಣಮಟ್ಟದ ಮೊಟ್ಟೆಗಳ ಸರಬರಾಜು
3. ಬೆಳೆದ ಗೂಡುಗಳ ವಿಲೇವಾರಿಗಾಗಿ ಗೂಡು ಮಾರುಕಟ್ಟೆಗಳ ನಿರ್ವಹಣೆ.
4. ರೇಷ್ಮೆ ವ್ಯವಸಾಯದ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಾಯ.

ನೇಕಾರರ ಹಿತರಕ್ಷಣೆಗಾಗಿ ಸರ್ಕಾರವು ಈ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ
2. ವಸತಿ ಕಾರ್ಯಾಗಾರ
3. ಆರೋಗ್ಯ ವಿಮಾ ಯೋಜನೆ
4. ಸಾಮಾಜಿಕ ಭದ್ರತೆ (ಗುಂಪು ವಿಮಾ ಯೋಜನೆ)
5. ತರಬೇತಿ, ಮಗ್ಗ/ಸಲಕರಣೆ ಪೂರೈಕೆ
6. ನೇಕಾರರ ಅಧ್ಯಯನ ಪ್ರವಾಸ
7. ಕೈಮಗ್ಗ ಕ್ಲಸ್ಟರ್‌ಗಳ ಅಭಿವೃದ್ಧಿ
8. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ
9. ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ರೇಷ್ಮೆ ಮಾರಾಟ ಮಂಡಳಿಯಿಂದ ಕೈಮಗ್ಗ ಸಹಕಾರ ಸಂಘಗಳು/ಕೈಮಗ್ಗ ಅಭಿವೃದ್ಧಿ ನಿಗಮ ಇವರು ಖರೀದಿಸುವ ಕಚ್ಚಾನೂಲಿಗೆ ಪ್ರತಿ 1 ಕೆ.ಜಿ.ಗೆ ರೂ. 15/– ರಂತೆ ಸಹಾಯಧನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ವಿಷಯ: ಕೈಮಗ್ಗ ಮತ್ತು ಯಂತ್ರ ಮಗ್ಗಗಳ ಉದ್ಯಮದ ಪುನಶ್ಚೇತನ

382 (943) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ಮಾನ್ಯ ಜವಳಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ನಶಿಸುತ್ತಿರುವ ಕೈಮಗ್ಗ ಕ್ಷೇತ್ರ ಹಾಗೂ ಸಂಕಷ್ಟದಲ್ಲಿರುವ ಯಂತ್ರ ಮಗ್ಗ ಕ್ಷೇತ್ರಗಳ ಪುನಶ್ಚೇತನಕ್ಕಾಗಿ ಸರ್ಕಾರ ಕೈಗೊಳ್ಳಲಿರುವ ಯೋಜನೆಗಳೇನು;

(ಆ) ಪ್ರಸ್ತುತ ರಾಜ್ಯದಲ್ಲಿ ಚಾಲನೆಯಲ್ಲಿರುವ ಕೈಮಗ್ಗ ಮತ್ತು ಯಂತ್ರ ಮಗ್ಗಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಯಂತ್ರ ಮಗ್ಗಗಳಿಗೆ ಸಬ್ಸಿಡಿ ನೀಡುವ ಯೋಜನೆಯು ಸರ್ಕಾರದ ಮುಂದಿರುವುದೇ ಹಾಗೂ ಅದನ್ನು ಅನುಷ್ಠಾನಗೊಳಿಸಲಾಗುವುದೇ? (ವಿವರ ನೀಡುವುದು)

ಶ್ರೀ ವರ್ತೂರು ಪ್ರಕಾಶ್ (ಮಾನ್ಯ ಜವಳಿ ಸಚಿವರು)

(ಅ) ನಶಿಸುತ್ತಿರುವ ಕೈಮಗ್ಗ ಮತ್ತು ಸಂಕಷ್ಟದಲ್ಲಿರುವ ವಿದ್ಯುತ್ (ಯಂತ್ರ) ಮಗ್ಗ ಕ್ಷೇತ್ರಗಳ ಪುನಶ್ಚೇತನಕ್ಕಾಗಿ ಸರ್ಕಾರವು ಪ್ರಸ್ತುತ ಈ ಸೌಲಭ್ಯಗಳನ್ನು ಒದಗಿಸುತ್ತಿದೆ.

1) ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ

2) ವಸತಿ ಕಾರ್ಯಾಗಾರ ನಿರ್ಮಾಣ

3) ಆರೋಗ್ಯ ವಿಮೆ

4) ಸಾಮಾಜಿಕ ಭದ್ರತೆ

5) ಮೂಲಭೂತ ಸೌಕರ್ಯಗಳು

6) ತರಬೇತಿ, ಮಗ್ಗ / ಸಲಕರಣೆ ಪೂರೈಕೆ

7) ಬಂಡವಾಳ ಹೂಡಿಕೆ ಸಹಾಯಧನ

8) ರಿಯಾಯಿತಿ, ದರದಲ್ಲಿ ವಿದ್ಯುತ್ ಪೂರೈಕೆ

9) ನೇಕಾರರ ಅಧ್ಯಯನ ಪ್ರವಾಸ

10) ವಿದ್ಯುತ್‌ಚ್ಛಕ್ತಿ ಸಹಾಯಧನ

11) ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳ ಸ್ಥಾಪನೆ

12) ಕೈಮಗ್ಗ ಕ್ಲಸ್ಟರ್‌ಗಳ ಅಭಿವೃದ್ಧಿ

13) ಸಮಗ್ರ ಟೆಕ್ಸ್‌ಟೈಲ್ಸ್ ಸ್ಥಾಪನೆ

(ಆ) ಪ್ರಸ್ತುತ ರಾಜ್ಯದಲ್ಲಿ ಚಾಲನೆಯಲ್ಲಿರುವ ಕೈಮಗ್ಗ ಮತ್ತು ವಿದ್ಯುತ್ (ಯಂತ್ರ) ಮಗ್ಗಗಳ ಜಿಲ್ಲಾವಾರು ವಿವರಗಳನ್ನು <u>ಅನುಬಂಧದಲ್ಲಿ</u> ಲಗತ್ತಿಸಿದೆ.

(ಇ) ಹೌದು

2011–12ನೇ ಸಾಲಿನ ಆಯವ್ಯಯದಲ್ಲಿ ಮಗ್ಗರಹಿತ ಕೂಲಿ ನೇಕಾರರಿಗೆ ಹೊಸ ಯೋಜನೆಯನ್ನು ಜಾರಿಗೆ ತರಲಾಗಿದೆ. ವಿವರ ಇಂತಿದೆ.

ಪ್ರತಿ ಘಟಕಕ್ಕೆ –2 ಮಗ್ಗಗಳಂತೆ

ಘಟಕ ವೆಚ್ಚ–ರೂ 2.00 ಲಕ್ಷ

* ನೇಕಾರರ ಫಲಾನುಭವಿಗಳಿಗೆ

ಸಹಾಯಧನ ಗರಿಷ್ಟ ರೂ.1.00 ಲಕ್ಷ (ಶೇ.50)

ಫಲಾನುಭವಿ ಪಾಲು ರೂ.1.00 ಲಕ್ಷ

* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಫಲಾನುಭವಿಗೆ

ಸಹಾಯಧನ ಗರಿಷ್ಠ ರೂ.1.80 ಲಕ್ಷ (ಶೇ.90)

ಫಲಾನುಭವಿ ಪಾಲು ರೂ.0.20 ಲಕ್ಷ

ಕರ್ನಾಟಕ ವಿಧಾನಸಭಾ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 943ಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಚಾಲನೆಯಲ್ಲಿರುವ ಕೈಮಗ್ಗ ಮತ್ತು ವಿದ್ಯುತ್ (ಯಂತ್ರ) ಮಗ್ಗಗಳ ಜಿಲ್ಲಾವಾರು ವಿವರಗಳ ಅನುಬಂಧ (1995–96ರ ಗಣತಿಯನ್ವಯ)

ಕ್ರ.ಸಂ.	ಜಿಲ್ಲೆ	ಕೈಮಗ್ಗಗಳ ಸಂಖ್ಯೆ	ವಿದ್ಯುತ್ (ಯಂತ್ರ) ಮಗ್ಗಗಳ ಸಂಖ್ಯೆ
1	ಬೆಂಗಳೂರು (ನಗರ)	8352	25321
2	ಬೆಂಗಳೂರು (ಗ್ರಾಮಾಂತರ) ರಾಮನಗರ	288	32975
3	ಬೆಳಗಾವಿ	5099	14650
4	ಬಿಜಾಪುರ	3756	1750
5	ಬಾಗಲಕೋಟೆ	20599	9918
6	ಬಳ್ಳಾರಿ	2402	28
7	ಬೀದರ್	1336	0
8	ಚಿಕ್ಕಮಗಳೂರು	218	0
9	ಚಿತ್ರದುರ್ಗ	3425	14
10	ದಾವಣಗೆರೆ	3426	30
11	ಧಾರವಾಡ	891	230
12	ಹಾವೇರಿ	4016	1086

13	ಗದಗ್	4012	1081
14	ದಕ್ಷಿಣ ಕನ್ನಡ	721	4
15	ಉಡುಪಿ	721	6
16	ಗುಲ್ಬರ್ಗ/ಯಾದಗಿರಿ	3525	34
17	ಹಾಸನ	962	0
18	ಕೋಲಾರ/ ಚಿಕ್ಕಬಳ್ಳಾಪುರ	1827	256
19	ಕೊಡಗು	28	0
20	ಮಂಡ್ಯ	238	30
21	ಮೈಸೂರು	680	101
22	ಚಾಮರಾಜನಗರ	684	104
23	ರಾಯಚೂರು	374	89
24	ಕೊಪ್ಪಳ	1499	356
25	ಶಿವಮೊಗ್ಗ	1026	0
26	ತುಮಕೂರು	6426	472
27	ಉತ್ತರಕನ್ನಡ	74	31
	ಒಟ್ಟು	**76605**	**88566**

ಕನ್ನಡ ಮತ್ತು ಸಂಸ್ಕೃತಿಯ ಅಭಿವೃದ್ಧಿ ಪರ ಯೋಜನೆಗಳು

384 (945) ಶ್ರೀ ಎನ್. ಎ ಹ್ಯಾರಿಸ್ (ಶಾಂತಿನಗರ) ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕನ್ನಡ ಮತ್ತು ಸಂಸ್ಕೃತಿಯ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು? ಈ ಕಾರ್ಯಕ್ರಮಗಳಿಗೆ ಸರ್ಕಾರ ನೀಡುತ್ತಿರುವ ಅನುದಾನವೆಷ್ಟು ಹಾಗೂ ಸದರಿ ಅನುದಾನವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ?

(ಆ) ಕನ್ನಡ ಭಾಷೆಯ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ನಿಯಂತ್ರಿಸಲು ಹಾಗೂ ಕನ್ನಡ ಭಾಷೆಯನ್ನು ಶೈಕ್ಷಣಿಕವಾಗಿ ರಾಜ್ಯದಲ್ಲಿರುವ ಎಲ್ಲಾ ಭಾಷಿಕರೂ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?